ಶಿಕಾರಿಪುರ ತಾಲೂಕಿನಲ್ಲಿ ಶಿಳ್ಳೇಕ್ಯಾತರು, ಹಂದಿಗೊಲ್ಲರು, ದೊಂಬರ ಜನಾಂಗದವರ ನಿವೇಶನಕ್ಕೆ ಸಮಸ್ಯೆಗಳಿವೆ. ಸಾಗರ ಮತ್ತು ಸೊರಬ ತಾಲೂಕಿನಲ್ಲಿ ಕೊರಚ, ಶಿಳ್ಳೇಕ್ಯಾತರ ಜಾತಿಪ್ರಮಾಣ ಪತ್ರ ಪಡೆಯುವಲ್ಲಿ ಸಮಸ್ಯೆ ಇದ್ದು, ತಹಸೀಲ್ದಾರರು ಈ ದಾಖಲಾತಿ ನೀಡುವಲ್ಲಿ ಅನುಕೂಲ ಮಾಡಿಕೊಟ್ಟಿದ್ದಾರೆ.

ಜಿ.ಪಲ್ಲವಿ ಅಧ್ಯಕ್ಷೆ, ಪ.ಜಾ ಮತ್ತು ಪಪಂ. ಅಲೆಮಾರಿ ಅಭಿವೃದ್ಧಿ ನಿಗಮ

ಕೆನರಾ ಬ್ಯಾಂಕ್ ಶಿವಮೊಗ್ಗ ಜಿಲ್ಲೆಗೆ ಮನೆ ಮಾತಾಗಿದೆ

ಮಹಾ ಪ್ರಬಂಧಕ ಗಂಗಾಧರ ಅಭಿಮತ | ಕೆನರಾ ಬ್ಯಾಂಕ್ ವತಿಯಿಂದ ಶುದ್ಧ ಕುಡಿಯುವ ನೀರಿನ ಘಟಕ ಕೊಡುಗೆ

ಭದ್ರಾವತಿ ತಾಲೂಕಿನ ಸನ್ಯಾಸಿ ಕೋಡಮಗ್ಗಿ ಗ್ರಾಮದಲ್ಲಿ ಕೆನರಾ ಬ್ಯಾಂಕ್‌ನಿಂದ ಸ್ಥಾಪಿಸಿರುವ ಶುದ್ಧ ಕುಡಿಯುವ ನೀರಿನ ಘಟಕವನ್ನು ಬುಧವಾರ ಉದ್ಘಾಟಿಸಲಾಯಿತು.

• **ಕನ್ನಡಪ್ರಭ ವಾರ್ತೆ** ಶಿವಮೊಗ್ಗ

ಸಾಮಾಜಿಕ ಹೊಣೆಗಾರಿಕೆಯಲ್ಲಿ ಕೆನರಾ ಬ್ಯಾಂಕ್ ಸದಾ ಮುಂದಿರುತ್ತದೆ ಎಂದು ಕೆನರಾ ಬ್ಯಾಂಕ್ ಮಣಿಪಾಲ್ ವೃತ್ತ ಕಚೇರಿಯ ಮಹಾ ಪ್ರಬಂಧಕ ಗಂಗಾಧರ ಹೇಳಿದರು.

ಅವರು ಬುಧವಾರ ಸನ್ಯಾಸಿ ಕೋಡಮಗ್ಗಿ ಗ್ರಾಮದಲ್ಲಿ ಕೆನರಾ ಬ್ಯಾಂಕ್ ಗ್ರಾಮ ದತ್ತು ಸ್ವೀಕಾರ ಯೋಜನೆಯಲ್ಲಿ ಸುಮಾರು 10 ಲಕ್ಷ ರು. ವೆಚ್ಚದಲ್ಲಿ ಕೆನರಾ ಬ್ಯಾಂಕ್‌ನಿಂದ ಸ್ಥಾಪಿಸಿರುವ ಶುದ್ಧ ಕುಡಿಯುವ ನೀರಿನ ಘಟಕವನ್ನು ಉದ್ಘಾಟಿಸಿ ಮಾತನಾಡಿ, ಕೆನರಾ ಬ್ಯಾಂಕ್ ಶಿವಮೊಗ್ಗ ಜಿಲ್ಲೆಗೆ ಮನೆ ಮಾತಾಗಿದೆ ಎಂದರು.

ನಮ್ಮ ಸಂಸ್ಥಾಪಕ ಅಮ್ಮೆಂಬಳ ಸುಬ್ಬರಾವ್ ಪೈ ಅವರು ಕೇವಲ ಲಾಭಕ್ಕಾಗಿ ಬ್ಯಾಂಕನ್ನು ಪ್ರಾರಂಭ ಮಾಡದೆ ಸಾಮಾಜಿಕವಾಗಿ ಸಾರ್ವಜನಿಕರಿಗೆ ಕೊಡುಗೆಯನ್ನು ನೀಡಬೇಕು ಎಂಬ ಉದ್ದೇಶದಿಂದ ಬ್ಯಾಂಕನ್ನು ಪ್ರತಿ ಹಳ್ಳಿಯ ಜನರಿಂದ ಶೇರಿನ ಮೊತ್ತವನ್ನು ಪಡೆದುಕೊಂಡು ಕೇವಲ 2 ಸಾವಿರ ಠೇವಣಿಯೊಂದಿಗೆ ಪ್ರಾರಂಭಗೊಂಡು ಸುಮಾರು 20 ಲಕ್ಷ ಕೋಟಿ ರು. ವಹಿವಾಟನ್ನು ಇಂದು ಹೊಂದಿದೆ ಎಂದು ತಿಳಿಸಿದರು.

ಮಹಿಳೆಯರ ವಿದ್ಯಾಭ್ಯಾಸಕ್ಕಾಗಿ ನಮ್ಮ ಬ್ಯಾಂಕಿನಿಂದ ಪ್ರತಿ ವರ್ಷ ಸರ್ಕಾರಿ ಶಾಲೆಯಲ್ಲಿ ಓದುವ ವಿದ್ಯಾರ್ಥಿನಿಯರಿಗೆ ವಿದ್ಯಾನಿಧಿಯನ್ನು ನೀಡುತ್ತಾ ಬಂದಿದೆ. ಲಾಭದ ಬದಲು ಸಾಮಾಜಿಕವಾಗಿ ಸಾರ್ವಜನಿಕರು ಅಭಿವೃದ್ಧಿ ಹೊಂದಲು ತನ್ನ ಕೊಡುಗೆಯನ್ನು ನೀಡುತ್ತಾ ಬಂದಿದೆ. ದೈನಂದಿನ ಚಟುವಟಿಕೆಗಳಿಗೆ ನೀರು ಬಹಳ ಅಮೂಲ್ಯ. ನೀರನ್ನು ಹಿತ ಹಾಗೂ ಮಿತವಾಗಿ ಬಳಸಬೇಕು. ಇಂದು ಪ್ರಾರಂಭವಾಗಿರುವ ಕುಡಿಯುವ ನೀರಿನ ಘಟಕ ಗ್ರಾಮಸ್ಥರಿಗೆ ಸದ್ಬಳಕೆ ಆಗಬೇಕು ಎಂದು ಆಶಿಸಿದರು. ಸುಮಾರು 127 ಪ್ರಾದೇಶಿಕ ಕಚೇರಿಯಿಂದ 127 ಹಳ್ಳಿಗಳನ್ನು ದತ್ತು ಪಡೆದುಕೊಂಡು 200 ಕೋಟಿ ರು. ವೆಚ್ಚದಲ್ಲಿ ಗ್ರಾಮದ ಅಭಿವೃದ್ಧಿಗೆ ಕೆನರಾ ಬ್ಯಾಂಕ್ ಶ್ರಮಿಸುತ್ತಿದೆ. ಕೆನರಾ ಬ್ಯಾಂಕ್ ಸ್ವಉದ್ಯೋಗ ಪ್ರಾರಂಭಿಸಲು ಸಾರ್ವಜನಿಕರಿಗೆ ಉಚಿತವಾಗಿ ತರಬೇತಿಯನ್ನು ನೀಡಿ ಆರ್ಥಿಕವಾಗಿ ಸಹಾಯವನ್ನು ನೀಡುತ್ತಿದೆ. ಪ್ರತಿ ಜಿಲ್ಲೆಯಿಂದ ಬಂದಂತಹ ಲಾಭವನ್ನು ಸಿಎಸ್‌ಆರ್ ಚಟುವಟಿಕೆ ಮುಖಾಂತರ ಸಾರ್ವಜನಿಕರಿಗೆ ನೀಡುತ್ತಿದೆ ಎಂದರು.

ಈ ಸಂದರ್ಭದಲ್ಲಿ ಶಿವಮೊಗ್ಗ ಪ್ರಾದೇಶಿಕ ಕಾರ್ಯಾಲಯದ ಮುಖ್ಯಸ್ಥ ಆರ್. ದೇವರಾಜ್, ವಿಭಾಗೀಯ ವ್ಯವಸ್ಥಾಪಕ ವೀರ ರಾಘವನ್, ಹಿರಿಯ ವ್ಯವಸ್ಥಾಪಕ ಪ್ರಶಾಂತ್, ಲೀಡ್ ಬ್ಯಾಂಕ್ ಮುಖ್ಯ ವ್ಯವಸ್ಥಾಪಕ ಹನುಮಂತಪ್ಪ, ಕೆನರಾ ಬ್ಯಾಂಕ್ ಉದ್ಯೋಗಿಗಳು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

ಇಂದು ವಿಶ್ವರಂಗಭೂಮಿ ದಿನಾಚರಣೆ

• **ಕನ್ನಡಪ್ರಭ ವಾರ್ತೆ** ಶಿವಮೊಗ್ಗ

ಕಲಾವಿದರ ಒಕ್ಕೂಟದಿಂದ ಮಾ.27ರಂದು ಮಧ್ಯಾಹ್ನ 2 ಗಂಟೆಗೆ ಕುವೆಂಪು ರಂಗಮಂದಿರದಲ್ಲಿ ಮತ್ತು ನಗರದ ವಿವಿಧ ಸ್ಥಳಗಳಲ್ಲಿ ವಿಶ್ವರಂಗಭೂಮಿ ದಿನಾಚರಣೆಯನ್ನು ಆಯೋಜನೆ ಮಾಡಲಾಗಿದೆ ಎಂದು ಒಕ್ಕೂಟದ ಅಧ್ಯಕ್ಷ ಕಾಂತೇಶ್ ಕದರ ಮಂಡಲಗಿ ಹೇಳಿದರು.

ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಕಲಾವಿದರ ಒಕ್ಕೂಟವು ಕಳೆದ 20 ವರ್ಷಗಳಿಂದ ನಿರಂತರವಾಗಿ ವಿಶ್ವರಂಗಭೂಮಿ ದಿನಾಚರಣೆಯನ್ನು ಆಚರಿಸುತ್ತ ಬಂದಿದೆ. ಈ ಭಾರಿಯೂ ಕೂಡ ವಿಶಿಷ್ಟವಾಗಿ ಮಾ.27ರಂದು ವಿಶ್ವರಂಗಭೂಮಿ ದಿನಾಚರಣೆಯನ್ನು ಆಚರಿಸಲಾಗುತ್ತಿದೆ. ಅಂದು ಬೆಳಗ್ಗೆ 7 ಗಂಟೆಗೆ ರವೀಂದ್ರ ನಗರದ ಉದ್ಯಾನವನದಲ್ಲಿ ರಂಗಗೀತೆಗಳ ಗಾಯನ, ಮಧ್ಯಾಹ್ನ 2 ಗಂಟೆಗೆ ಕುವೆಂಪು ರಂಗಮಂದಿರದಲ್ಲಿ ಸಾರ್ವಜನಿಕರಿಗಾಗಿ ಕಿರು ನಾಟಕ ಸ್ಪರ್ಧೆ ನಡೆಯಲಿದೆ. ಸುಮಾರು 12 ತಂಡಗಳು ಇದರಲ್ಲಿ ಭಾಗವಹಿಸುವರು ಎಂದರು.

ಸಂಜೆ 4 ಗಂಟೆಗೆ ಶಿವಪ್ಪನಾಯಕ ವೃತ್ತದಿಂದ ಮಹಾವಲಸೆ ರಂಗನಡಿಗೆ ಕಾರ್ಯಕ್ರಮ ಇರುತ್ತದೆ. ಯುದ್ಧದ ಭೀತಿ ನಮ್ಮನ್ನು ಆವರಿಸಿದೆ. ಇದನ್ನು ಬಿಂಬಿಸುವ ಕಾರ್ಯಕ್ರಮ ಮಹಾವಲಸೆಯಾಗಿದೆ. ಈ ನಡಿಗೆ ಕುವೆಂಪು ರಂಗಮಂದಿರದವರೆಗೆ ಸಾಗುವುದು. ನಂತರ ಸಹ್ಯಾದ್ರಿ ಕಲಾ ಕಾಲೇಜಿನ ಪಾತ್‌ವೇಸ್ ವಿದ್ಯಾರ್ಥಿಗಳಿಂದ ಪ್ರಾತ್ಯಕ್ಷಿಕೆ ನಡೆಯುವುದು ಈ ಎಲ್ಲಾ ಕಾರ್ಯಕ್ರಮಗಳ ನಿರ್ವಹಣೆಯನ್ನು ಯೋಗೀಶ್, ಆರ್.ಎಸ್. ಹಾಲಸ್ವಾಮಿ, ಡಾ. ಜಿ.ಆರ್.ಲವ ನಡೆಸಿಕೊಡುವರು ಎಂದು ಮಾಹಿತಿ ನೀಡಿದರು.

ಸಂಜೆ 6.30ಕ್ಕೆ ವೇದಿಕೆ ಕಾರ್ಯಕ್ರಮವನ್ನು ಶಾಸಕ ಎಸ್.ಎನ್. ಚನ್ನಬಸಪ್ಪ ಉದ್ಘಾಟಿಸುವರು. ರಂಗ ನಿರ್ದೇಶಕ ನಟರಾಜ್ ಹೊನ್ನವಳ್ಳಿ, ರಂಗಾಯಣ ನಿರ್ದೇಶಕ ಪ್ರಸನ್ನ ಸಾಗರ ಉಪಸ್ಥಿತರಿರುವರು. ವೇದಿಕೆಯ ಕಾರ್ಯಕ್ರಮದ ನಂತರ ಕಾರ್ಯಾಗಾರದಲ್ಲಿ ಭಾಗವಹಿಸುವ ವಿದ್ಯಾರ್ಥಿಗಳಿಂದ ರಂಗ ಪ್ರದರ್ಶನ ನಡೆಯುವುದು ಎಂದರು. ರಂಗಾಯಣ ಆಡಳಿತಾಧಿಕಾರಿ ಎ.ಸಿ. ಶೈಲಜಾ ಕರ್ನಾಟಕ ನಾಟಕ ಅಕಾಡೆಮಿ ಜಿಲ್ಲಾ ಸಂಚಾಲಕ ಡಾ. ಗಣೇಶ್ ಕೆಂಚನಾಲ, ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಹೊನ್ನಾಳಿ ಚಂದ್ರಶೇಖರ್‌ಈ ಕಾರ್ಯಕ್ರಮಗಳಿಗೆ ಕೈಜೋಡಿಸಿದ್ದಾರೆ ಎಂದು ಮಾಹಿತಿ ನೀಡಿದರು.

ಗೋಷ್ಠಿಯಲ್ಲಿ ಹೊನ್ನಾಳಿ ಚಂದ್ರಶೇಖರ್, ಪ್ರಸನ್ನಸಾಗರ, ಆರ್.ಎಸ್. ಹಾಲಸ್ವಾಮಿ, ಸುರೇಶ್ ಇದ್ದರು.

ಅಲೆಮಾರಿ ಜನಾಂಗದ ಸೌಲಭ್ಯಕ್ಕೆ ಪೂರಕ ದಾಖಲೆ ನೀಡಿ

ಅಧಿಕಾರಿಗಳಿಗೆ ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಜಿ.ಪಲ್ಲವಿ ಸೂಚನೆ | ವಿವಿಧ ಯೋಜನೆಗಳ ಪ್ರಗತಿ ಪರಿಶೀಲನೆ, ಸಮಾಲೋಚನಾ ಸಭೆ

• **ಕನ್ನಡಪ್ರಭ ವಾರ್ತೆ** ಶಿವಮೊಗ್ಗ

ಅಲೆಮಾರಿ ಜನಾಂಗದವರು ವಸತಿ ಮತ್ತು ಸರ್ಕಾರಿ ಸೌಲಭ್ಯ ಪಡೆಯಲು ಬೇಕಾಗಿರುವ ಜಾತಿ ಪ್ರಮಾಣ ಪತ್ರ, ಇತರೆ ಪೂರಕ ದಾಖಲೆಗಳನ್ನು ಸರಳೀಕರಿಸಿ ನೀಡಲು ಎಲ್ಲ ತಾಲೂಕು ತಹಸೀಲ್ದಾರರಿಗೆ ನಿರ್ದೇಶನ ನೀಡಲಾಗಿದೆ ಎಂದು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಜಿ.ಪಲ್ಲವಿ ತಿಳಿಸಿದರು.

ಜಿಲ್ಲಾಡಳಿತ ಕಚೇರಿ ಸಭಾಂಗಣದಲ್ಲಿ ಗುರುವಾರ ಏರ್ಪಡಿಸಲಾಗಿದ್ದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮದಿಂದ ಜಾರಿಯಾದ ವಿವಿಧ ಯೋಜನೆಗಳ ಪ್ರಗತಿ ಪರಿಶೀಲನೆ ಮತ್ತು ಸಮಾಲೋಚನಾ ಸಭೆ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿ, ಈಗಾಗಲೇ 21 ಜಿಲ್ಲೆಗಳನ್ನು ತಾಲೂಕುವಾರು ಪ್ರವಾಸ ಕೈಗೊಂಡು, ಅಲೆಮಾರಿ ಜನಾಂಗದ ಸ್ಥಿತಿಗತಿಗಳನ್ನು ಪರಿಶೀಲಿಸುತ್ತಿದ್ದೇನೆ. ಟೆಂಟ್, ಜೋಪಡಿ ಮತ್ತು ಅವರು ವಾಸಮಾಡುತ್ತಿರುವ

ಪ್ರದೇಶಗಳಿಗೆ ಖುದ್ದು ಭೇಟಿ ನೀಡಿ, ವಸತಿ, ಶಿಕ್ಷಣ, ಸರ್ಕಾರಿ ಸೌಲಭ್ಯ ಒದಗಿಸುವ ನಿಟ್ಟಿನಲ್ಲಿ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಿದ್ದೇನೆ ಎಂದರು.

ರಾಜ್ಯದಲ್ಲಿ 11 ಲಕ್ಷ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಅಲೆಮಾರಿ ಸಮುದಾಯವಿದ್ದು, ಜಿಲ್ಲೆಯಲ್ಲಿ 20,084 ಪ.ಜಾ ಮತ್ತು 2728 ಪ.ಪಂ. ಜನಸಂಖ್ಯೆ ಇದೆ. 2026ರ ಬಜೆಟ್‌ನಲ್ಲಿ ಅಲೆಮಾರಿ ಜನಾಂಗದ ಅಭಿವೃದ್ಧಿಗಾಗಿ ರು.100 ಕೋಟಿ ವಿಶೇಷ ಅನುದಾನ ಹಾಗೂ ಈ ಜನಾಂಗದ ಮಕ್ಕಳು ಶೈಕ್ಷಣಿಕವಾಗಿ ಮುಂದೆ ಬರಲು 4 ವಸತಿ ನಿಲಯಗಳನ್ನು ಘೋಷಣೆ ಮಾಡಲಾಗಿದೆ ಎಂದು ಮಾಹಿತಿ ನೀಡಿದರು.

ಶಿವಮೊಗ್ಗ ತಾಲೂಕಿನ ಗೋಂದಿ ಚಟ್ನಹಳ್ಳಿ, ಕಲ್ಲಾಪುರ, ಮಲ್ಲಿಗೇನಹಳ್ಳಿ, ನಗರದ ಎಂಆರ್‌ಎಸ್ ಭಾಗದಲ್ಲಿ ವಾಸವಾಗಿರುವ ಸುಡುಗಾಡು ಸಿದ್ದ, ಹಂದಿಜೋಗಿ, ಗೋಸಂಗಿ, ಶಿಳ್ಳೇಕ್ಯಾತ, ಕೊರಚ ಇತರೆ ಅಲೆಮಾರಿ ಜನಾಂಗದವರು ವಾಸವಾಗಿರುವ ಪ್ರದೇಶಗಳಿಗೆ ಭೇಟಿ ನೀಡಿ, ಪರಿಶೀಲನೆ ನಡೆಸಿ, ಅವರು ಶಾಶ್ವತವಾಗಿ ನೆಲೆ ನಿಲ್ಲಲು ವಸತಿ, ನಿವೇಶನ ಕೊಡಿಸುವ ಬಗ್ಗೆ, ಸರ್ಕಾರದ ಸೌಲಭ್ಯಗಳನ್ನು ಒದಗಿಸುವ ಬಗ್ಗೆ ಕ್ರಮ ವಹಿಸಲಾಗುತ್ತಿದೆ ಎಂದು ತಿಳಿಸಿದರು.

ತೀರ್ಥಹಳ್ಳಿಯಲ್ಲಿ ದೊಂಬರು, ಸುಡುಗಾಡು ಸಿದ್ದರು ಹೊಳೆದಂಡೆಯಲ್ಲಿ ನೆಲೆಸುತ್ತಿದ್ದು, ರಾಜೀವ್ ಗಾಂಧಿ ವಸತಿ ನಿಗಮದಿಂದ ಅವರಿಗೆ ವಸತಿ ಮಂಜೂರು ಮಾಡಲಾಗಿದೆ. ಶೀಘ್ರದಲ್ಲೇ ಹಕ್ಕುಪತ್ರ ವಿತರಣೆ ಮಾಡಲಾಗುವುದು ಎಂದು ತಿಳಿಸಿದರು.

ಭದ್ರಾವತಿಯಲ್ಲಿ ಅತಿವೃಷ್ಟಿಯಿಂದ ಶಿಳ್ಳೇಕ್ಯಾತರು ವಾಸವಾಗಿದ್ದ ಟೆಂಟ್ ಬಿದ್ದು ಹೋಗಿ, ಗಂಗಮ್ಮ ಮತ್ತು ಹನುಮಂತಪ್ಪನವರ ಮಗಳು ಮರಣ ಹೊಂದಿದ್ದು, ಇನ್ನೂ ಪರಿಹಾರ ದೊರೆತಿಲ್ಲ. ಪರಿಹಾರ ನೀಡಲು ಜಿಲ್ಲಾಧಿಕಾರಿ ಶೀಘ್ರವೇ ಕ್ರಮ ವಹಿಸುವುದಾಗಿ ತಿಳಿಸಿದ್ದಾರೆ ಎಂದರು. ರಾಜ್ಯದಲ್ಲಿ ವಸತಿರಹಿತ ಅಲೆಮಾರಿಗಳಿಗೆ 3200 ಮನೆ ನೀಡುವ ಅವಕಾಶ ನಿಗಮಕ್ಕಿದ್ದು, ಜಿಲ್ಲೆಗಳಿಂದ ಬೇಡಿಕೆ ಬರಬೇಕಿದೆ ಎಂದರು.

ನಿವೇಶನ ರಹಿತರ ಪಟ್ಟಿ ನೀಡಲು ಸೂಚನೆ: ಅಲೆಮಾರಿ ಜನಾಂಗದವರಿಗೆ ವಸತಿ ಸೌಲಭ್ಯ ನೀಡುವ ಸಲುವಾಗಿ ಇನ್ನು ಒಂದು ವಾರದೊಳಗೆ ವಸತಿರಹಿತರ ಮಾಹಿತಿ ನೀಡುವಂತೆ ಸಮಾಜ ಕಲ್ಯಾಣ ಇಲಾಖೆ ಹಾಗೂ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ. ನಿಗಮದಿಂದ ನೀಡುವ ಸೌಲಭ್ಯಕುರಿತು ಅರಿವು ಮೂಡಿಸಲು ಅನುದಾನ ನೀಡಲಾಗುತ್ತಿದೆ ಎಂದರು.

ಗೋಷ್ಠಿಯಲ್ಲಿ ಜಿಲ್ಲಾಧಿಕಾರಿ ಪ್ರಭುಲಿಂಗ ಕವಳಿಕಟ್ಟಿ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ರಮೇಶ್ ಕುಮಾರ್, ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕ ಮಲ್ಲೇಶಪ್ಪ ಡಿ, ನಿಗಮದ ಸದಸ್ಯರು, ನಿಗದಮ ಕೋ ಆರ್ಡಿನೇಟರ್ ಆನಂದಕುಮಾರ್ ಹಾಜರಿದ್ದರು.

‘ಯುದ್ಧ ತಪ್ಪಿಸಿ ಶಾಂತಿ ಮಾರ್ಗ ಅನುಸರಿಸೋಣ’

ಶಿವಮೊಗ್ಗ: ಇತ್ತೀಚಿನ ಜಾಗತಿಕ ಪರಿಸ್ಥಿತಿಯಲ್ಲಿ ವಿವಿಧ ದೇಶಗಳ ನಡುವೆ ಉಂಟಾಗುತ್ತಿರುವ ಯುದ್ಧ ಮತ್ತು ಸಂಘರ್ಷಗಳು ಮಾನವಕುಲಕ್ಕೆ ಮಾರಕವಾಗಿದ್ದು, ಯುದ್ಧವನ್ನು ತಪ್ಪಿಸಿ ಶಾಂತಿಯ ಮಾರ್ಗವನ್ನು ಅನುಸರಿಸೋಣ ಎಂದು ನಗರದ ಆಚಾರ್ಯ ತುಳಸಿ ರಾಷ್ಟ್ರೀಯ ವಾಣಿಜ್ಯ ಕಾಲೇಜು ಹಾಗೂ ಕಮಲಾ ನೆಹರು ರಾಷ್ಟ್ರೀಯ ಮಹಿಳಾ ಕಾಲೇಜಿನ ವಿದ್ಯಾರ್ಥಿಗಳು ಗುರುವಾರ ಸಂಜೆ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿದರು.

ಯುದ್ಧವೆಂಬುದು ಮಾನವ ಲೋಕದ ಮಾಯದ ಗಾಯ. ಸಾವಿರಾರು ನಿರಪರಾಧಿ ಪ್ರಾಣಗಳು ಜೀವವನ್ನು ಕಳೆದುಕೊಳ್ಳುತ್ತಿದ್ದಾರೆ. ಮನೆಗಳು, ಮೂಲಸೌಕರ್ಯಗಳು, ಪ್ರಕೃತಿ ಸಂಪತ್ತು ಸಂಪೂರ್ಣವಾಗಿ ನಾಶವಾಗುತ್ತಿವೆ. ದೇಶಗಳ ಆರ್ಥಿಕ ಸ್ಥಿತಿ ಕುಸಿಯುತ್ತಿದೆ. ಸಮಾಜದಲ್ಲಿ ಅಶಾಂತಿ ವಾತಾವರಣ ನಿರ್ಮಾಣವಾಗುತ್ತದೆ ಎಂದು ದೂರಿದರು. ಈ ಹಿನ್ನೆಲೆಯಲ್ಲಿ ಶಾಂತಿಯ ಮಹತ್ವವನ್ನು ಅರಿತು, ಸಮಸ್ಯೆಗಳನ್ನು ಹಿಂಸೆಯಿಂದಲ್ಲ, ಸ್ನೇಹ ಭಾವದಿಂದ ಪರಿಹರಿಸಬೇಕು. ರಾಷ್ಟ್ರಗಳು ಪರಸ್ಪರ ಸಹಕಾರ, ಸಹಬಾಳ್ವೆ ಮತ್ತು ಪರಸ್ಪರ ಗೌರವದ ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕು. ಶಿಕ್ಷಣವು ನಮ್ಮಲ್ಲಿ ಶಾಂತಿ, ಸೌಹಾರ್ದತೆಯನ್ನು ಕಲಿಸಿದ್ದು, ಯುದ್ಧವು ಸಮಸ್ಯೆಗಳ ಪರಿಹಾರವಲ್ಲ, ಶಾಂತಿಯೇ ಶಾಶ್ವತ ಪರಿಹಾರ ಎಂದು ವಿದ್ಯಾರ್ಥಿಗಳು ಕರೆ ನೀಡಿದರು.

ಈ ಸಂದರ್ಭದಲ್ಲಿ ಉಪನ್ಯಾಸಕರಾದ ಪ್ರವೀಣ್, ಶ್ರೀಲಲಿತಾ, ಸ್ಮಿತಾ ರೂಪೇಶ್, ನಕ್ಷಾ, ಸೌಪರ್ಣಿಕಾ, ಗಾಯತ್ರಿ, ರಾಘವೇಂದ್ರ, ರಶ್ಮಿ, ಭಾರತಿದಯಾನಂದ, ಡಾ.ಬಸವರಾಜ್, ಮಂಜು. ಎಸ್ ಉಪಸ್ಥಿತರಿದ್ದರು.

ದಾಖಲಾತಿ ತಿದ್ದುಪಡಿ ತಡೆಗೆ ವಕೀಲರ ಸಂಘದಿಂದ ಮನವಿ

ಸಾಗರ: ತಾಲೂಕು ಕಚೇರಿಯ ದಾಖಲಾತಿ ಕೊಠಡಿಯಲ್ಲಿ ದಾಖಲಾತಿಗಳ ತಿದ್ದುಪಡಿಯನ್ನು ತಡೆಗಟ್ಟುವುದು, ದಾಖಲಾತಿ ಬಗ್ಗೆ ಸೂಕ್ತ ನಿಗಾವಹಿಸುವಂತೆ ಒತ್ತಾಯಿಸಿ ಗುರುವಾರ ವಕೀಲರ ಸಂಘದಿಂದ ಉಪವಿಭಾಗಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.

ಈಗಾಗಲೆ ತಾಲೂಕು ಕಚೇರಿಯಲ್ಲಿ ದಾಖಲಾತಿ ತಿದ್ದುಪಡಿ ಸಂಬಂಧ ಇಬ್ಬರು ಅಧಿಕಾರಿಗಳನ್ನು ಸಾಗರ ತಹಸೀಲ್ದಾರ್‌ಅವರ ದೂರಿನ ಹಿನ್ನೆಲೆಯಲ್ಲಿ ಬಂಧಿಸಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಯುತ್ತಿದೆ. ಆದರೆ ಈ ದಾಖಲಾತಿ ಕೊಠಡಿಯಲ್ಲಿ ದಾಖಲಾತಿಗಳ ತಿದ್ದುಪಡಿ ಆಗುತ್ತಿದೆ ಎಂದು ಸಾರ್ವಜನಿಕ ವಲಯದಲ್ಲಿ ವ್ಯಾಪಕ ಚರ್ಚೆ ಆಗುತ್ತಿದೆ ಎಂದು ದೂರಿದರು.

ಇತ್ತೀಚೆಗೆ ಇಬ್ಬರು ಅಧಿಕಾರಿಗಳನ್ನು ಬಂಧಿಸಿರುವುದರಿಂದ ದಾಖಲಾತಿ ತಿದ್ದುಪಡಿ ಆಗುತ್ತಿತ್ತು ಎನ್ನುವ ಚರ್ಚೆಗೆ ಪುಷ್ಟಿ ದೊರೆತಿದೆ. ರಜಾ ದಿನಗಳಲ್ಲಿ, ರಾತ್ರಿ ಹೊತ್ತಿನಲ್ಲಿ ದಾಖಲಾತಿ ಕೊಠಡಿಗಳು ತೆರೆದು ಇರುತ್ತದೆ ಎನ್ನುವ ದೂರುಗಳಿವೆ. ಅಲ್ಲದೆ ಲೇಔಟ್‌ದಾರರು, ರಿಯಲ್ ಎಸ್ಟೇಟ್‌ದಾರರು ಇತರರು ಈ ದಾಖಲಾತಿ ಕೊಠಡಿಯಲ್ಲಿ ಕಚೇರಿ ಹೊರತಾದ ವೇಳೆಯಲ್ಲಿ ಇರುವುದು ಕಂಡು ಬಂದಿರುತ್ತದೆ ಎಂದು ವಕೀಲರ ಸಂಘ ದೂರಿದೆ.

ಈಗಾಗಲೆ ಕೋಟ್ಯಾಂತರ ರು. ಸರ್ಕಾರಿ ಜಾಗಗಳ ದಾಖಲಾತಿ ತಿದ್ದುಪಡಿ ಮೂಲಕ ಹಕ್ಕನ್ನು ನೀಡಿರುವುದು ದೃಢಪಟ್ಟಿರುತ್ತದೆ. ಇನ್ನಾದರೂ ತಾಲೂಕು ಕಚೇರಿಯ ದಾಖಲೆ ಸಂರಕ್ಷಣೆ ಮಾಡಿ ತಪ್ಪಿತಸ್ಥರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು. ತಾಲೂಕು ಕಚೇರಿಯಲ್ಲಿ ನಡೆಯುತ್ತಿರುವ ದಾಖಲಾತಿ ತಿದ್ದುಪಡಿ ಬಗ್ಗೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಸಂಘದ ಅಧ್ಯಕ್ಷ ಗಿರೀಶ್ ಗೌಡ, ಜ್ಯೋತಿ ಕೋವಿ, ಅಣ್ಣಪ್ಪ ಎಚ್.ಕೆ., ಕರುಣಾಕರ, ಕೆ.ವಿ.ಪ್ರವೀಣ್, ತ್ಯಾಗಮೂರ್ತಿ, ಪರಿಮಳ, ಜಿಕ್ರಿಯಾ, ಉಲ್ಲಾಸ ಹಾಜರಿದ್ದರು.

ಸಮಾಜ ಸೇವಕ ಮುನೀರ್ ಅಹಮದ್ ನಿಧನ

ಭದ್ರಾವತಿ: ನಗರದ ಅನ್ವರ್‌ಕಾಲೋನಿ ಉಸ್ಮಾನಿಯಾ ಚಾರಿಟಬಲ್ ಟ್ರಸ್ಟ್ ಸಂಸ್ಥಾಪಕ ಕಾರ್ಯದರ್ಶಿ, ಸಮಾಜ ಸೇವಕರು, ಅಪ್ಪಟ ಕನ್ನಡ ಅಭಿಮಾನಿ ಮುನೀರ್ ಅಹಮದ್ ಕುಂಸಿ(74) ಗುರುವಾರ ನಿಧನರಾದರು. ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ ಇದ್ದಾರೆ. ಇವರ ಅಂತ್ಯಕ್ರಿಯೆ ಶುಕ್ರವಾರ ಕುಂಸಿಯಲ್ಲಿ ನಡೆಯಲಿದ್ದು, ನಗರದ ಅನ್ವರ್ ಕಾಲೋನಿಯಲ್ಲಿ ವಾಸವಿದ್ದ ಮುನೀರ್‌ಅವರು ಕೆಲವು ವರ್ಷಗಳಿಂದ ಅನಾರೋಗ್ಯಕ್ಕೆ ಒಳಗಾಗಿದ್ದರು. ಪ್ರಗತಿಪರ ಸಂಘಟನೆಗಳ ಒಕ್ಕೂಟದಲ್ಲಿ ಗುರುತಿಸಿಕೊಂಡು ಹಲವಾರು ಹೋರಾಟಗಳಲ್ಲಿ ಪಾಲ್ಗೊಂಡಿದ್ದರು. **ಗಣ್ಯರಿಂದ ಸಂತಾಪ:** ಇವರ ಅಗಲಿಕೆ ಕನ್ನಡ ಸಾರಸ್ವತ ಲೋಕಕ್ಕೆ ಮತ್ತು ಸಮಾಜ ಸೇವೆಯ ಕ್ಷೇತ್ರಕ್ಕೆ ದೊಡ್ಡ ನಷ್ಟವಾಗಿದೆ. ಅವರ ಆತ್ಮಕ್ಕೆ ಚಿರಶಾಂತಿ ಸಿಗಲಿ ಎಂದು ಪ್ರಾರ್ಥಿಸುತ್ತೇವೆ ಎಂದು ಉಸ್ಮಾನಿಯಾ ಚಾರಿಟಬಲ್ ಟ್ರಸ್ಟ್ ಸಂಸ್ಥಾಪಕ ಅಧ್ಯಕ್ಷ ಜೆಬಿಟಿ ಬಾಬು, ಅಬ್ದುಲ್ ಖದೀರ್, ವಿಧಾನ ಪರಿಷತ್ ಸದಸ್ಯೆ ಬಲ್ಕೀಶ್ ಬಾನು, ಮಾಜಿ ಉಪಮೇಯರ್ ಮಹಮದ್ ಸನಾವುಲ್ಲಾ, ಅಂಜುಮಾನ್ ಇಸ್ಲಾವುಲ್ ಮುಸ್ಲಿಮೀನ್ ಅಧ್ಯಕ್ಷ ಅಯೂಬ್ ಖಾನ್, ಪ್ರಗತಿಪರ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಪ್ರೊ. ಎಂ. ಚಂದ್ರಶೇಖರಯ್ಯ ಸಂತಾಪ ಸೂಚಿಸಿದ್ದಾರೆ.

ಕೆನರಾ ಬ್ಯಾಂಕ್ Canara Bank
ಸಿಂಡಿಕೇಟ್ Syndicate Bank
(A GOVERNMENT OF INDIA UNDERTAKING)

ಶಿವಮೊಗ್ಗ ಶೇಷಾದ್ರಿಪುರಂ ಶಾಖೆ (1820)
ಹೊನ್ನಾಳಿ ರಸ್ತೆ,
ಶೇಷಾದ್ರಿಪುರಂ, ಶಿವಮೊಗ್ಗ-577201
(ಮುಖ್ಯ ಕಛೇರಿ: ಬೆಂಗಳೂರು)

ಡಿಮಾಂಡ್ ನೋಟೀಸ್
2002ರ ಹಣಕಾಸು ಆಸ್ತಿಗಳ ಭದ್ರತೆ ಹಾಗೂ ಪುನರ್ ನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯಿದೆ 13 (2)ರ ಅಡಿ ನೋಟೀಸ್ ಸಾಲಗಾರರು/ಜಾಮೀನುದಾರರು/ಅಡಮಾನದಾರರು

REF:CB1820/SARFAESI/DN/CHETHANPRASAD **DATE: 24-03-2026**

ಗೆ, 1. ಶ್ರೀ ಆರ್ ಚೇತನ್ ಪ್ರಸಾದ್ (ಸಾಲಗಾರರು) ಬಿನ್ ರಾಜೇಂದ್ರ ಪ್ರಸಾದ್ 104 ಸಿರಿ ಇಂಡಸ್ ಅಪಾರ್ಟ್ಮೆಂಟ್ ಗುಂಡು ಮುನೇಶ್ವರ ದೇವಸ್ಥಾನದ ಬೀದಿ ಬೆಂಗಳೂರು 560022. 2. ಶ್ರೀಮತಿ ರೀತು ಕುಮಾರಿ (ಸಹ ಸಾಲಗಾರರು) ಕೋಂ ಚೇತನ್ ಪ್ರಸಾದ್, 104 ಸಿರಿ ಇಂಡಸ್ ಅಪಾರ್ಟ್ಮೆಂಟ್ ಗುಂಡು ಮುನೇಶ್ವರ ದೇವಸ್ಥಾನದ ಬೀದಿ ಬೆಂಗಳೂರು 560022

ವಿಷಯ: ಸೆಕ್ಯೂರಿಟೈಸೇಷನ್ ಸೆಕ್ಷನ್ 13(2) ಅಡಿಯಲ್ಲಿ ನೋಟಿಸ್ ನೀಡಲಾಗಿದೆ.
ಆರ್ಥಿಕ ಆಸ್ತಿಗಳ ಪುನರ್ನಿರ್ಮಾಣ ಮತ್ತು ಭದ್ರತಾ ಆಸಕ್ತಿ ಕಾಯಿದೆ, 2002 ಜಾರಿ

ಗೆ, ಶ್ರೀ ಆರ್ ಚೇತನ್ ಪ್ರಸಾದ್ ಬಿನ್ ರಾಜೇಂದ್ರ ಪ್ರಸಾದ್ (ಇವರನ್ನು ಇನ್ನು ಮುಂದೆ ಸಾಲಗಾರರು ಎಂದು ಪರಿಗಣಿಸಲಾಗುತ್ತದೆ.) ಶ್ರೀಮತಿ ರೀತು ಕುಮಾರಿ ಕೋಂ ಆರ್ ಚೇತನ್ ಪ್ರಸಾದ್ (ಇವರನ್ನು ಇನ್ನು ಮುಂದೆ ಸಹ-ಸಾಲಗಾರರು ಎಂದು ಪರಿಗಣಿಸಲಾಗುತ್ತದೆ.) ಅವರು ನಮ್ಮ ಶಾಖೆಯಿಂದ ಈ ಕೆಳಗಿನ ಸಾಲ/ಕ್ರೆಡಿಟ್ ಸೌಲಭ್ಯಗಳನ್ನು ಪಡೆದುಕೊಂಡಿದ್ದಾರೆ.

ಕ್ರ.ಸಂ.	ಲೋನ್ ನಂ	ಸಾಲದ ತರಹೆ	ಹೊಣೆಗಾರಿಕೆಯ ಜೊತೆಗೆ ಬಡ್ಡಿ ರವರೆಗೆ	ಸಾಲದ ಮೇಲಿನ ಬಡ್ಡಿ
1	1820619006305	Housing finance	₹ 41,26,459.48	09.15% +2.00%

ಮೇಲೆ ಹೇಳಿದ ಸಾಲ/ಕ್ರೆಡಿಟ್ ಸೌಲಭ್ಯಗಳನ್ನು ಈ ಕೆಳಗಿನ ವೇಳಾಪಟ್ಟಿಯಲ್ಲಿ ಹೆಚ್ಚು ನಿರ್ದಿಷ್ಟವಾಗಿ ವಿವರಿಸಿರುವ ಸ್ವತ್ತುಗಳ ಅಡಮಾನದ ಮೂಲಕ, ನಮ್ಮ ಪರವಾಗಿ ನೀವು ಕಾರ್ಯಗತಗೊಳಿಸಿದ ಸಂಬಂಧಿತ ದಾಖಲೆಗಳ ಮೂಲಕ ಸರಿಯಾಗಿ ಸುರಕ್ಷಿತಗೊಳಿಸಲಾಗಿದೆ. ನಿಗದಿಪಡಿಸಿದ ನಿಯಮಗಳು ಮತ್ತು ಷರತ್ತುಗಳ ಪ್ರಕಾರ ನಿಮ್ಮ ಹೊಣೆಗಾರಿಕೆಗಳನ್ನು ವಿಲೇವಾರಿ ಮಾಡಲು ನೀವು ವಿಫಲರಾಗಿರುವುದರಿಂದ ಬ್ಯಾಂಕ್ **23-03-2026 ರಂದು** ಸಾಲವನ್ನು ಎನ್‌ಪಿಎ ಎಂದು ವರ್ಗೀಕರಿಸಿದೆ. ಆದ್ದರಿಂದ, ನಾವು ಈ ಮೂಲಕ ನಿಮಗೆ **ರೂ.41,26,459.48/- (ನಲವತ್ತೊಂದು ಲಕ್ಷದ ಇಪ್ಪತ್ತಾರು ಸಾವಿರದ ನಾಲ್ಕುನೂರಾ ಐವತ್ತೊಂಭತ್ತು ಮತ್ತು ನಲವತ್ತೆಂಟು ಪೈಸೆ ಮಾತ್ರ)** ಸಂಪೂರ್ಣ ಹೊಣೆಗಾರಿಕೆಯನ್ನು ವಿಸರ್ಜಿಸುವಂತೆ ಕರೆ ಮಾಡುವ ವಿಷಯದ ಕಾಯಿದೆಯ ಸೆಕ್ಷನ್ 13(2) ಅಡಿಯಲ್ಲಿ ನಿಮಗೆ ಈ ಸೂಚನೆಯನ್ನು ನೀಡುತ್ತೇವೆ. ಸಂಚಿತ ಮತ್ತು ನವೀಕೃತ ಬಡ್ಡಿ ಮತ್ತು ಇತರ ವೆಚ್ಚಗಳು ಸೂಚನೆಯ ದಿನಾಂಕದಿಂದ 60 ದಿನಗಳೊಳಗಾಗಿ ತೀರಿಸಬೇಕು. ವಿಫಲವಾದರೆ ನಾವು ಕಾಯಿದೆಯ ಸೆಕ್ಷನ್ 13(4) ಅಡಿಯಲ್ಲಿ ಎಲ್ಲಾ ತರಹದ ಹಕ್ಕುಗಳನ್ನು ಚಲಾಯಿಸುತ್ತೇವೆ. ಇದಲ್ಲದೆ, ನಮ್ಮ ಪೂರ್ವಾನುಮತಿಯಿಲ್ಲದೆ ಯಾವುದೇ ರೀತಿಯಲ್ಲಿ ವೇಳಾಪಟ್ಟಿಯಲ್ಲಿ ಉಲ್ಲೇಖಿಸಲಾದ ಯಾವುದೇ ಸುರಕ್ಷಿತ ಸ್ವತ್ತುಗಳೊಂದಿಗೆ ವ್ಯವಹರಿಸದಂತೆ ನೀವು ಈ ಮೂಲಕ ನಿರ್ಬಂಧಿಸಲ್ಪಟ್ಟಿದ್ದೀರಿ. ಇದು ವಿಷಯ ಕಾಯಿದೆ ಮತ್ತು ಅಥವಾ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಅಡಿಯಲ್ಲಿ ನಮಗೆ ಲಭ್ಯವಿರುವ ಯಾವುದೇ ಇತರ ಹಕ್ಕುಗಳಿಗೆ ಅನ್ವಯವಾಗುವುದಿಲ್ಲ. ಸುರಕ್ಷಿತ ಸ್ವತ್ತುಗಳನ್ನು ಪಡೆದುಕೊಳ್ಳಲು ಲಭ್ಯವಿರುವ ಸಮಯಕ್ಕೆ ಸಂಬಂಧಿಸಿದಂತೆ, ಸರ್ಫೇಸಿ ಕಾಯಿದೆಯ ಸೆಕ್ಷನ್ 13 ರ ಉಪ-ವಿಭಾಗ (8) ರ ನಿಬಂಧನೆಗಳಿಗೆ ನಿಮ್ಮ ಗಮನಕ್ಕೆ ತರಲಾಗಿದೆ. ಬೇಡಿಕೆಯ ಸೂಚನೆಯನ್ನು ಶಾಖೆಯ ದಾಖಲೆಯಲ್ಲಿ ಲಭ್ಯವಿರುವ ನಿಮ್ಮ ಕೊನೆಯ ವಿಳಾಸದಿಂದಾಗಿ ನೋಂದಾಯಿತ ಅಂಚೆ ಮೂಲಕ ನಿಮಗೆ ನೀಡಲಾಗಿದ್ದು, ಸದರಿ ಅಂಚೆಯು ನೀವು ಸ್ವೀಕರಿಸದೇ ಇರುವುದರಿಂದ ಪತ್ರಿಕೆಯ ಮೂಲಕ ಪ್ರಕಟಿಸಲಾಗಿದೆ.

ಷೆಡ್ಯೂಲ್
ಅಡಮಾನದ/ಹೈಪೋಥೆಕೇಟೆಡ್ ಸ್ವತ್ತುಗಳ ನಿರ್ದಿಷ್ಟ ವಿವರಗಳನ್ನು ಇಲ್ಲಿ ತಿಳಿಸಲಾಗಿದೆ.

ಶೀರ್ಷಿಕೆ ಹೊಂದಿರುವವರ ಹೆಸರು	ಅಡಮಾನದಾರರ ಆಸ್ತಿಯ ವಿವರ
ಶ್ರೀಮತಿ ರೀತು ಕುಮಾರಿ ಕೋಂ ಚೇತನ್ ಪ್ರಸಾದ್ ಮತ್ತು ಶ್ರೀ ಚೇತನ್ ಪ್ರಸಾದ್ ಬಿನ್ ರಾಜೇಂದ್ರ ಪ್ರಸಾದ್ CERSAI ID - 400032419796	**ಶೆಡ್ಯೂಲ್ ಎ ಆಸ್ತಿ :** ಈ ಆಸ್ತಿಯ ಎಲ್ಲಾ ಭಾಗ ಹಾಗೂ ಅಂಶಗಳು ಸೇರಿದಂತೆ ಶಿವಮೊಗ್ಗ ಜಿಲ್ಲಾಧಿಕಾರಿಗಳ ಆದೇಶದಂತೆ ವಸತಿ ಬಳಕೆಗಾಗಿ ಪರಿವರ್ತಿಸಲಾದ ಜಾಗದ ನಂ.ಎಸ್‌ಎಂಜಿಡಿಸಿ, ಎಎಲ್‌ಎನ್(1)ಎಸ್‌ಆರ್-186/2014-15(5038/2014-15), ದಿನಾಂಕ 06.01.2015 ಆಗಿದ್ದು, ಇದರ ಶಿವಮೊಗ್ಗ ಮಹಾನಗರ ಪಾಲಿಕೆ ಖಾತಾ ಸಂ.3514/ ಸರ್ವೆ ನಂ. 145/10, ಪ್ರಾಪರ್ಟಿ ಕಾರ್ಡ್ ನಂ. ಎಸ್06-8519 ಇದರ ವಿಸ್ತೀರ್ಣ 3218.85 ಚದುರ ಮೀಟರ್‌ಗಳು (ನವುಲೆ ಗ್ರಾಮ, ಕಸಬಾ ಹೋಬಳಿ, ಶಿವಮೊಗ್ಗ ತಾಲ್ಲೂಕಿನಲ್ಲಿರುವ ಹಳೆಯ ಸರ್ವೆ ನಂ. 145/10) ಜೊತೆಗೆ ಕಟ್ಟಿರುವ ಕಟ್ಟಡವು ವಾರ್ಡ್ ನಂ. 8, ನವುಲೆ, ಕೃಷಿನಗರ (ಬಸವೇಶ್ವರ ನಗರದ ಒಳಗೆ), ಶಿವಮೊಗ್ಗದಲ್ಲಿದ್ದು, ಇದಕ್ಕೆ ಚೆಕ್ಕುಬಂಧಿ: ಪೂರ್ವಕ್ಕೆ: ರಸ್ತೆ, ಪಶ್ಚಿಮ: ಮರು ಸರ್ವೇ ನಂ. 148, ಉತ್ತರ: ರಸ್ತೆ ದಕ್ಷಿಣ: ಚಾನಲ್. **ಶೆಡ್ಯೂಲ್ ಬಿ ಆಸ್ತಿ :** (ಎ ಶೆಡ್ಯೂಲ್ ಆಸ್ತಿಯಲ್ಲಿ ಅವಿಭಜಿತ ಪಾಲು) ಮೇಲೆ ತಿಳಿಸಲಾದ ಶೆಡ್ಯೂಲ್ ಎ ಆಸ್ತಿಯಲ್ಲಿ 391.03 ಚದರ ಅಡಿ ಅವಿಭಜಿತ ಪಾಲು, ಹಕ್ಕು, ಶೀರ್ಷಿಕೆ ಮತ್ತು ಬಡ್ಡಿ. **ಶೆಡ್ಯೂಲ್ ಸಿ ಆಸ್ತಿ :** (ಖರೀದಿದಾರರಿಗೆ ಅಪಾರ್ಟ್‌ಮೆಂಟ್ ವಿವರಣೆಯನ್ನು ನೀಡಲಾಗಿದೆ) ಈ ಆಸ್ತಿಯ ಎಲ್ಲಾ ಭಾಗವು ಮತ್ತು ಆಸ್ತಿಯು ಶಿವಮೊಗ್ಗದ ನವುಲೆಯ ವಾರ್ಡ್ ಸಂಖ್ಯೆ 8, ಕೃಷಿನಗರ, (ಬಸವೇಶ್ವರನಗರದ ಒಳಗೆ) ನಲ್ಲಿರುವ, 2 ಬಿಹೆಚ್‌ಕೆ ಫ್ಲಾಟ್/ಅಪಾರ್ಟ್‌ಮೆಂಟ್ ಸಂಖ್ಯೆ 409, ಇದು "PEBBLES" ಬಹುಮಹಡಿ ಅಪಾರ್ಟ್‌ಮೆಂಟ್ ಕಟ್ಟಡ ಸಂಕೀರ್ಣದ ನಾಲ್ಕನೇ ಮಹಡಿಯಲ್ಲಿ 1086.19 ಚದರ ಅಡಿ (ಸರಿಸುಮಾರು) ಸೂಪರ್ ಬಿಲ್ಟ್ ಅಪ್ ವಿಸ್ತೀರ್ಣವನ್ನು ಹೊಂದಿದೆ. ಕಟ್ಟಡದ ಹೊರಭಾಗದಲ್ಲಿ 60 ಸಂಖ್ಯೆಯ ಕಾರ್ ಪಾರ್ಕಿಂಗ್‌ಗಾಗಿ ಮತ್ತು ಶೆಡ್ಯೂಲ್ ಡಿ ನಲ್ಲಿ ಉಲ್ಲೇಖಿಸಲಾದ ಇತರ ಉದ್ದೇಶಗಳಿಗಾಗಿ ಕಾರ್ ಪಾರ್ಕಿಂಗ್‌ಗಾಗಿ ಗೊತ್ತುಪಡಿಸಿದ ಪ್ರದೇಶವನ್ನು ಹೊಂದಿದೆ. ಚಕ್ಕುಬಂಧಿ: ಪೂರ್ವ: ಫ್ಲಾಟ್ ಸಂಖ್ಯೆ - 408 ಪಶ್ಚಿಮ: ಫ್ಲಾಟ್ ಸಂಖ್ಯೆ - 410 ಉತ್ತರ: ಫ್ಲಾಟ್ ಸಂಖ್ಯೆ - 404 ದಕ್ಷಿಣ: ಚಾನೆಲ್. (ಸೂಪರ್ ಬಿಲ್ಟ್-ಅಪ್ ಏರಿಯಾ ಎಂದರೆ ಪ್ರತಿ ಅಪಾರ್ಟ್ಮೆಂಟ್ ಘಟಕದ ವಿಶೇಷ ಮಹಡಿ-ವಿಸ್ತೀರ್ಣಗಳು ಮತ್ತು ಸಾಮಾನ್ಯ ಗೋಡೆಗಳು, ಹಾದಿಗಳು, ಮೆಟ್ಟಿಲುಗಳು, ಲಿಫ್ಟ್ ಕೊಠಡಿಗಳು, ನೀರಿನ ಒಳಚರಂಡಿ ಮತ್ತು ವಿದ್ಯುತ್ ಕೊಳವೆಗಳು ಮತ್ತು ಇತರ ಅಪಾರ್ಟ್ಮೆಂಟ್‌ಗಳ ಖರೀದಿದಾರರೊಂದಿಗೆ ಸಾಮಾನ್ಯವಾಗಿ ಬಳಸುವ ಇತರ ಪ್ರದೇಶಗಳಿಂದ ಆವೃತವಾದ ಅನುಪಾತದ ಪ್ರದೇಶಗಳನ್ನು ಒಳಗೊಂಡಿದೆ) ಶೆಡ್ಯೂಲ್ ಸಿ ಅಪಾರ್ಟ್ಮೆಂಟ್ ಅನ್ನು ಸ್ಕೆಚ್ ಅನುಬಂಧ I ರಲ್ಲಿ ಹೆಚ್ಚು ಸಂಪೂರ್ಣವಾಗಿ ತೋರಿಸಲಾಗಿದೆ ಮತ್ತು ಈ ಮಾರಾಟ ಪತ್ರಕ್ಕೆ ಲಗತ್ತಿಸಲಾದ ಸ್ಕೆಚ್‌ನಲ್ಲಿ ಕಾರ್ ಪಾರ್ಕಿಂಗ್ ಸ್ಥಳವನ್ನು ತೋರಿಸಲಾಗಿದೆ, ಇವುಗಳನ್ನು ಹಳದಿ ಬಣ್ಣದ ಚೌಕ ಕೃತಿಯಲ್ಲಿ ತೋರಿಸಲಾಗಿದೆ. ಈ ಸ್ಕೆಚ್ ಈ ಪತ್ರದ ಒಂದು ಭಾಗವಾಗಿರುತ್ತದೆ. **ಶೆಡ್ಯೂಲ್ ಡಿ (ಬಹುಮಹಡಿ ಕಟ್ಟಡ ಮತ್ತು ಶೆಡ್ಯೂಲ್ ಬಿ ಅಪಾರ್ಟ್‌ಮೆಂಟ್‌ನ ನಿರ್ದಿಷ್ಟತೆ)** ಎ. ಅಡಿಪಾಯ: ಆರ್‌ಸಿಸಿ ಸ್ವತಂತ್ರ ಅಡಿಪಾಯ ಮತ್ತು ಸ್ತಂಭಗಳು ಮತ್ತು ಫ್ರೇಮ್ ರಚನೆ ಮತ್ತು ಉಳಿಸಿಕೊಳ್ಳುವ ಗೋಡೆಗಳಿಗೆ ಗಾತ್ರದ ಕಲ್ಲಿನಂತೆ ವಿನ್ಯಾಸಗೊಳಿಸಲಾಗಿದೆ. ಬಿ. ಗೋಡೆಗಳು: ಉತ್ತಮ ಗುಣಮಟ್ಟದ ಬ್ಲಾಕ್‌ಗಳು, ಆಂತರಿಕ ಇಟ್ಟಿಗೆ ಕಾಂಕ್ರೀಟ್ ಬ್ಲಾಕ್. ಸಿ. ಸ್ಲ್ಯಾಬ್‌ಗಳು/ಬೀಮ್‌ಗಳು: ಬಲವರ್ಧಿತ ಎರಕಹೊಯ್ದ ಇನ್-ಸಿಟು ಕಾಂಕ್ರೀಟ್ ಸ್ಲ್ಯಾಬ್‌ಗಳು ಮತ್ತು ಬೀಮ್‌ಗಳು. ಡಿ. ಕಿಟಕಿಗಳು: ಸುರಕ್ಷತಾ ಗ್ರಿಲ್‌ನೊಂದಿಗೆ ಸೊಳ್ಳೆ ಪರದೆಯೊಂದಿಗೆ ಸ್ಲೈಡಿಂಗ್ ಕಿಟಕಿಗಳು. ಇ. ಬಾಗಿಲುಗಳು: ಮುಖ್ಯ ಬಾಗಿಲು, ಪೂಜಾ ತೇಗ, ಪಿವಿಸಿ ಶಟರ್ ಹೊಂದಿರುವ ಒಳ ಬಾಗಿಲುಗಳು ಬಾಗಿಲುಗಳು. ಜಿ. ನೆಲಹಾಸು. ವಾಸಿಸುವ ಪ್ರದೇಶ: ವಿಟ್ರಿಫೈಡ್ ಫ್ಲೋರಿಂಗ್/ಡಬಲ್ ಗ್ಲೇಜ್, ಅಡುಗೆ ಕೋಣೆ: ಸ್ಟೇನ್‌ಲೆಸ್ ಸ್ಟೀಲ್ ಸಿಂಕ್ ಹೊಂದಿರುವ ಗ್ರಾನೈಟ್ ಅಡುಗೆಮನೆ, ರೆಫ್ರಿಜರೇಟರ್ ಪಾಯಿಂಟ್, ಎಕ್ಸಾಸ್ಟ್ ಫ್ಯಾನ್ ಪಾಯಿಂಟ್, ವಾಟರ್ ಪ್ಯೂರಿಫೈಯರ್ ಪಾಯಿಂಟ್ ಮತ್ತು ಗ್ಯಾಸ್ ಪೈಪ್ ಲೈನ್ ಸೌಲಭ್ಯ. ಮಲಗುವ ಕೋಣೆಗಳು: ವಿಟ್ರಿಫೈಡ್ ಫ್ಲೋರಿಂಗ್, ದೂರವಾಣಿ ಪಾಯಿಂಟ್, ಎಸಿ & ಟಿ ವಿ ಸಂಪರ್ಕ ಬಿಂದು. ಸ್ನಾನಗೃಹ ನೈರ್ಮಲ್ಯ ಫಿಟ್ಟಿಂಗ್ ಮತ್ತು ನೀರು ಪೂರೈಕೆ: ಸಿಪಿವಿಸಿ ಮತ್ತು ಪಿವಿಸಿ ಪೈಪ್‌ಗಳು, ಇದೇ ರೀತಿಯ ಗುಣಮಟ್ಟದ ಜಾಕ್ವಾರ್, ಆಂಟಿ ಸ್ಕಿಡ್ ಟೈಲ್ಸ್ ಫ್ಲೋರಿಂಗ್, ಡಿಜಿಟಲ್ ವಾಲ್ ಟೈಲ್ಸ್, ಜಿ. ಪೋರ್ಟಿಕ್: ಸಂದರ್ಶಕರಿಗೆ ಆಸನ ಸ್ಥಳದೊಂದಿಗೆ ಉತ್ತಮವಾಗಿ ವಿನ್ಯಾಸಗೊಳಿಸಲಾದ ಪೋರ್ಟಿಕ್. ಹೆಚ್. ವಿದ್ಯುತ್: ಫಿನೋಲೆಕ್ಸ್ ಅಥವಾ ಅಂತಹುದೇ ಗುಣಮಟ್ಟದ ಎಂಸಿಬಿ ಎಲ್ಲಾ ಕೊಠಡಿಗಳಲ್ಲಿ ವ್ಯಾಪಕವಾದ ವಿನ್ಯಾಸದೊಂದಿಗೆ ಇಎಲ್‌ಸಿಬಿ. ಆಂಕರ್ ಅಥವಾ ಅಂತಹುದೇ ಗುಣಮಟ್ಟದ ಸ್ವಿಚ್‌ಗಳು, ಇಂಟರ್‌ಕಾಮ್, ಭದ್ರತೆಯೊಂದಿಗೆ ಸಂಪರ್ಕ ಹೊಂದಿದ ಉಪಕರಣ, ಇನ್ವರ್ಟರ್ ಬಣ್ಣಗಳು. ಐ .ಲಿಫ್ಟ್‌ಗಳು: 8 ಜನರ ಸಾಮರ್ಥ್ಯವಿರುವ 2 ಉತ್ತಮ ಗುಣಮಟ್ಟದ ಲಿಫ್ಟ್‌ಗಳು. ಜೆ. ಪಾರ್ಕಿಂಗ್: ನಾಲ್ಕು ಚಕ್ರ ವಾಹನಗಳಿಗೆ ಪೇವರ್‌ಗಳೊಂದಿಗೆ ಉತ್ತಮವಾಗಿ ಯೋಜಿಸಲಾದ ಪಾರ್ಕಿಂಗ್ ಸ್ಥಳ. ಕೆ. ಹೆಚ್ಚುವರಿ ಕೆಲಸಗಳು: ಮಾರಾಟಗಾರರು ಫ್ಲಾಟ್‌ಗೆ ವಾರ್ಡ್ರೋಬ್‌ಗಳು ಮತ್ತು ಟಿವಿ ಘಟಕಗಳನ್ನು ಒಳಗೊಂಡಿದೆ.

ದಿನಾಂಕ: 19-02-2026 ಸ್ಥಳ: ಶಿವಮೊಗ್ಗ **ಸಹಿ/- ಅಧಿಕೃತ ಅಧಿಕಾರಿ, ಕೆನರಾ ಬ್ಯಾಂಕ್**

MANAPPURAM FINANCE LTD.
CIN : L65910KL1992PLC006623
Registered Office : W - 4/ 638A, Manappuram House, P.O. Valapad, Thrissur - 680 567, Kerala, India

ಹರಾಜು ಪ್ರಕಟಣೆ

ಈ ಕೆಳಗಿನ ಖಾತೆಗಳಲ್ಲಿ ಅಡವಿಟ್ಟಿರುವ ಚಿನ್ನಾಭರಣಗಳ ಸಾರ್ವಜನಿಕ ಹರಾಜನ್ನು 16/04/2026 ರಂದು ಬೆಳಿಗ್ಗೆ 10.00 ಗಂಟೆಯಿಂದ ಈ ಕೆಳಗಿನ ಶಾಖೆಗಳಲ್ಲಿ ನಡೆಸಲು ಉದ್ದೇಶಿಸಲಾಗಿದೆ ಎಂದು ಈ ಮೂಲಕ ವಿಶೇಷವಾಗಿ ಸಾಲಗಾರರಿಗೆ ಮತ್ತು ಸಾರ್ವಜನಿಕರಿಗೆ ತಿಳಿಸಲಾಗಿದೆ. ನೋಂದಾಯಿತ ಪತ್ರಗಳ ಮೂಲಕ ತಿಳಿಸಲಾಗಿದ್ದರೂ ಸಾಲದ ಮೊತ್ತವನ್ನು ಪಾವತಿಸಲು ವಿಫಲರಾದ ಸುಸ್ತಿದಾರ ಗ್ರಾಹಕರ ಚಿನ್ನದ ಆಭರಣಗಳನ್ನು ಹರಾಜು ಮಾಡಲಾಗುತ್ತದೆ. ಹರಾಜಾಗದ ವಸ್ತುಗಳನ್ನು ಯಾವುದೇ ಸೂಚನೆ ಇಲ್ಲದೆ ಬೇರೆ ಯಾವುದೇ ದಿನಗಳಲ್ಲಿ ಹರಾಜು ಮಾಡಲಾಗುವುದು. ಹರಾಜಿನ ದಿನಾಂಕದಂದು ಚಿನ್ನದ ಮಾರುಕಟ್ಟೆ ಬೆಲೆ ಅಥವಾ ಸರಾಸರಿ 30 ದಿನಗಳ IBJA ದರದ 85%, ಯಾವುದು ಹೆಚ್ಚೋ ಅದರ ಆಧಾರದ ಮೇಲೆ ಮೀಸಲು ಬೆಲೆಯನ್ನು ನಿಗದಿಪಡಿಸಲಾಗುತ್ತದೆ. ಸ್ಥಳ ಅಥವಾ ದಿನಾಂಕದಲ್ಲಿನ ಬದಲಾವಣೆಯನ್ನು (ಯಾವುದಾದರೂ ಇದ್ದರೆ) ಹರಾಜು ಕೇಂದ್ರದಲ್ಲಿ ಮತ್ತು ಕಂಪನಿಯ ವೆಬ್‌ಸೈಟ್‌ನಲ್ಲಿ ಪ್ರದರ್ಶಿಸಲಾಗುತ್ತದೆ. ಕೆಳಗೆ ನೀಡಲಾದ ವಿವರಗಳು ಶಾಖೆಯ ಹೆಸರು, ಸಾಲದ ಸಂಖ್ಯೆ, ಗ್ರಾಹಕರ ಹೆಸರು, ಒಟ್ಟು ಬಾಕಿ ಮೊತ್ತ (‘ನಲ್ಲಿ’) ಐಟಂ ಹೆಸರಿನ ಕ್ರಮದಲ್ಲಿದೆ

ಅಡವುಗಳ ಪಟ್ಟಿ :
ಚಿತ್ರದುರ್ಗ, ಚಳ್ಳಕೆರೆ ಬಸ್ ಸ್ಟ್ಯಾಂಡ್, 0134120730019891, ವೀರಣ್ಣ, 29548/-, ಡ್ರಾಪ್ಸ್ & ಸ್ಟಡ್ 1, ಚಿತ್ರದುರ್ಗ, ಚಿತ್ರದುರ್ಗ, 0102480700758932, ಎಂ ಕೀರ್ತಿರಾಜ್, 6500/-, ಸ್ಟಡ್ 1, ದಾವಣಗೆರೆ, ಶಿವಮೊಗ್ಗ ರೋಡು ಹರಪನಹಳ್ಳಿ ದಾವಣಗೆರೆ, 0128840730021533, ಜೀಲನ್ ಆರ್, 17669/-, ಡ್ರಾಪ್ಸ್ 1, ಶಿವಮೊಗ್ಗ, ವಿದ್ಯಾ ನಗರ ಬಿಹೆಚ್‌ರೋಡು, 0125560730018846, ಮಲ್ಲಿಕಾರ್ಜುನ ಎಸ್ ವಿ, 33289/-, ಫಿಂಗರ್ ರಿಂಗ್ಸ್ 1,ಡ್ರಾಪ್ಸ್ & ಸ್ಟಡ್ 1,

ಮೇಲಿನ ಹರಾಜಿನಲ್ಲಿ ಭಾಗವಹಿಸಲು ಬಯಸುವ ವ್ಯಕ್ತಿಗಳು ಈ ಮುಂದೆ ತಿಳಿಸಿರುವುದನ್ನು ಅನುಸರಿಸತಕ್ಕದ್ದು:- ಆಸಕ್ತಿಯುಳ್ಳ ಸವಾಲು ಕೂಗುವವರು (ಬಿಡ್ಡರ್ ಗಳು) ಎನ್‌ಇಎಫ್‌ಟಿ/ಆರ್ ಟಿಜಿಎಸ್ ವಿಧಾನದ ಮೂಲಕ ರೂ. 10,000/ ಅನ್ನು ಇಎಂಡಿ (ವಿಫಲಗೊಂಡ ಸವಾಲು ಕೂಗುವವರಿಗೆ ಮರುಪಾವತಿಯಾಗುವಂಥದ್ದು) ಆಗಿ ಹರಾಜಿನ ದಿನದಂದೇ ಸಲ್ಲಿಸಬೇಕು. ಸವಾಲು ಕೂಗುವವರು ಮಾನ್ಯವಾದ ಐಡಿ ಕಾರ್ಡ್/ಪ್ಯಾನ್ ಕಾರ್ಡ್ ಇಟ್ಟುಕೊಂಡಿರಬೇಕು. ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು 9072607147 ಅನ್ನು ಸಂಪರ್ಕಿಸಿ.

ಅಧಿಕೃತ ಅಧಿಕಾರಿ.
ಮಣಪ್ಪುರಂ ಫೈನಾನ್ಸ್ ಲಿ. ಪರವಾಗಿ

ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್
IDFC FIRST Bank
(ಹಿಂದಿನ ಕ್ಯಾಪಿಟಲ್ ಫಸ್ಟ್ ಲಿಮಿಟೆಡ್ ಮತ್ತು ಐಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್‌ನೊಂದಿಗೆ ವಿಲೀನಗೊಂಡಿದೆ)
CIN : L65110TN2014PLC097792
ನೋಂದಾಯಿತ ಕಛೇರಿ: ಕೆಆರ್‌ಎಂ ಟವರ್ಸ್, 8ನೇ ಮಹಡಿ, ಹ್ಯಾರಿಂಗ್‌ಟನ್ ರಸ್ತೆ, ಚೆಟ್‌ಪೇಟ್, ಚೆನ್ನೈ-600031. ದೂ: +91 44 4564 4000 | ಫ್ಯಾಕ್ಸ್ : +91 44 4564 4022.

ಅಪೆಂಡಿಕ್ಸ್ IV [ನಿಯಮ 8(1)]
ಸ್ವಾಧೀನ ಸೂಚನೆ (ಸ್ಥಿರ ಆಸ್ತಿಗಳಿಗಾಗಿ)

ಆದಾಗ್ಯೂ, ಕೆಳಸಹಿದಾರರು ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್‌ನ (ಹಿಂದಿನ ಕ್ಯಾಪಿಟಲ್ ಫಸ್ಟ್ ಲಿಮಿಟೆಡ್ ಮತ್ತು ಐಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್‌ನೊಂದಿಗೆ ವಿಲೀನಗೊಂಡಿದೆ) ಅಧಿಕೃತ ಅಧಿಕಾರಿಯಾಗಿ 2002ರ ಹಣಕಾಸು ಆಸ್ತಿಗಳ ಭದ್ರತೆ ಮತ್ತು ಪುನರ್ ನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯಿದೆಯಡಿ ಹಾಗೂ 2002ರ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳ ನಿಯಮ 3ರ ಜೊತೆಗೆ ಓದಿಕೊಳ್ಳಬೇಕಾದ ಸದರಿ ಕಾಯಿದೆಯ ಕಲಂ 13(12)ರಡಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ದಿನಾಂಕ **22.11.2025**ರ ಡಿಮಾಂಡ್ ನೋಟೀಸೊಂದನ್ನು ಸಾಲಗಾರರು, ಸಹ-ಸಾಲಗಾರರು ಮತ್ತು ಜಾಮೀನುದಾರರು **1. ಪೆರುಮಾಳ್ ಕೆ, 2. ವೆಂಕಟೇಶ್ ಪಿ,** ಇವರುಗಳಿಗೆ ನೋಟಿಸ್ ಜಾರಿಮಾಡಿ ನೋಟೀಸಿನಲ್ಲಿ ನಮೂದಿಸಿದ **20.11.2025**ರಂದು ಇದ್ದಂತೆ ಬಾಕಿಯಾಗಿರುವ **ಮೊತ್ತ ರೂ. 1,79,618.03/-** (ಒಂದು ಲಕ್ಷದ ಎಪ್ಪತ್ತೊಂಭತ್ತು ಸಾವಿರದ ಆರುನೂರ ಹದಿನೆಂಟು ರೂ. ಮತ್ತು ಮೂರು ಪೈಸೆ ಮಾತ್ರ) ಗಳನ್ನು ಸದರಿ ನೋಟೀಸ್ ಸ್ವೀಕರಿಸಿದ ದಿನಾಂಕದಿಂದ 60 ದಿನಗಳ ಒಳಗಾಗಿ ಮರುಪಾವತಿ ಮಾಡಲು ಸೂಚಿಸಿದ್ದರು.

ಸಾಲಗಾರರು ಸಾಲ ಮರುಪಾವತಿ ಮಾಡಲು ವಿಫಲರಾದುದರಿಂದ ಸಾಲಗಾರರಿಗೆ ಮತ್ತು ಸಾರ್ವಜನಿಕರಿಗೆ ವಿಸ್ತಾರವಾಗಿ ಸೂಚನೆ ನೀಡುವುದೇನೆಂದರೇ, ಕೆಳಸಹಿದಾರರು ಅವರಿಗೆ 2002ರ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳ ನಿಯಮ 8ರ ಜೊತೆ ಓದಿಕೊಳ್ಳಬೇಕಾದ ಸದರಿ ಕಾಯಿದೆಯ ಕಲಂ 13ರ ಉಪಬಂಧ (4) ರಡಿ ಅವರಿಗೆ ಪ್ರದತ್ತವಾದ ಅಧಿಕಾರಗಳಂತೆ ಕೆಳಕಂಡಂತೆ ವಿವರಿಸಲಾದ ಆಸ್ತಿಗಳ **ಸ್ವಾಧೀನತೆಯನ್ನು 2026ರ ಮಾರ್ಚ್ 25**ರಂದು ಪಡೆದುಕೊಂಡಿರುತ್ತಾರೆ.

ಸಾಲಗಾರರಿಗೆ ನಿರ್ದಿಷ್ಟವಾಗಿ ಮತ್ತು ಸಾರ್ವಜನಿಕರಿಗೆ ವಿಸ್ತಾರವಾಗಿ ಈ ಮೂಲಕ ಎಚ್ಚರಿಕೆ ನೀಡುವುದೇನೆಂದರೇ, ಸಾಲಕ್ಕಾಗಿ ಒದಗಿಸಿರುವ ಭದ್ರತಾ ಆಸ್ತಿಗಳ ಜೊತೆ ಯಾರೂ ಯಾವುದೇ ರೀತಿಯ ವ್ಯವಹಾರ ಮಾಡಬಾರದು ಮಾಡಿದ್ದೇ ಆದರೆ ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್‌ನ ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್‌ನ (ಹಿಂದಿನ ಕ್ಯಾಪಿಟಲ್ ಫಸ್ಟ್ ಲಿಮಿಟೆಡ್ ಮತ್ತು ಐಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್‌ನೊಂದಿಗೆ ವಿಲೀನಗೊಂಡಿದೆ)ಗೆ ಬಾಕಿಯಾಗಿರುವ ಮೊತ್ತ **ಮೊತ್ತ ರೂ. 1,79,618.03/-** (ಒಂದು ಲಕ್ಷದ ಎಪ್ಪತ್ತೊಂಭತ್ತು ಸಾವಿರದ ಆರುನೂರ ಹದಿನೆಂಟು ರೂ. ಮತ್ತು ಮೂರು ಪೈಸೆ ಮಾತ್ರ) ಮತ್ತು ಬಡ್ಡಿ ಸೇರಿದ ಮೊತ್ತಕ್ಕೆ ಭಾದ್ಯರಾಗಬೇಕಾಗುತ್ತದೆ.

ಸಾಲಗಾರರ ಗಮನವನ್ನು ಕಾಯಿದೆಯ ಕಲಂ 13ರ ಉಪ-ಬಂಧ (8)ರ ಕಟ್ಟಳೆಗಳ ಬಗ್ಗೆ ಗಮನ ಸೆಳೆಯಲಾಗಿದೆ. ಇದರಲ್ಲಿ ಭದ್ರತಾ ಆಸ್ತಿಗಳನ್ನು ಬಿಡಿಸಿಕೊಳ್ಳಲು ಲಭ್ಯವಿರುವ ಕಾಲಾವಕಾಶದ ಬಗ್ಗೆ ತಿಳಿಸಲಾಗಿದೆ.

ಸ್ಥಿರಾಸ್ತಿಗಳ ವಿವರಣೆ

ಸಕಲ ಸಮಸ್ತವೂ ಸೇರಿದಂತೆ ಆಸ್ತಿ ಸಂ. 226, ಪ್ರದೇಶ 30 x 40 = 1200 ಚದರ ಅಡಿ ನಿವೇಶನ, ಮತ್ತು ಮನೆ: 111.48 ಚದರ ಮೀಟರ್, ಕುರುಬರ ವಿಠ್ಠಲಪುರ ಗ್ರಾಮ, ಭದ್ರಾವತಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ, ಕರ್ನಾಟಕ- 577243. ಚಕ್ಕುಬಂದಿ:- ಪೂರ್ವಕ್ಕೆ: ಮಂಜಪ್ಪ ರವರ ಆಸ್ತಿ, ಉತ್ತರಕ್ಕೆ: ರಸ್ತೆ, ಪಶ್ಚಿಮಕ್ಕೆ: ನಾಗರಾಜಪ್ಪ ರವರ ಅಸ್ತಿ, ದಕ್ಷಿಣಕ್ಕೆ: ರಸ್ತೆ.

ದಿನಾಂಕ: 25.03.2026
ಸ್ಥಳ: ಕರ್ನಾಟಕ
ಸಾಲದ ಖಾತಾ ಸಂ. 23119575

ಸಹಿ/- ಅಧಿಕೃತ ಅಧಿಕಾರಿ
ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್
(ಹಿಂದಿನ ಕ್ಯಾಪಿಟಲ್ ಫಸ್ಟ್ ಲಿಮಿಟೆಡ್ ಮತ್ತು ಐಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್‌ನೊಂದಿಗೆ ವಿಲೀನಗೊಂಡಿದೆ)

ಬೇಕಾಗಿದ್ದಾರೆ

ಡಿಪ್ಲೊಮಾ ಅಥವಾ ಬಿ.ಇ ಸಿವಿಲ್ ಎಂಜಿನಿಯರ್, ಲೇಔಟ್ ಅಥವಾ ರಸ್ತೆ ಕೆಲಸದಲ್ಲಿ 2 ಅಥವಾ 3 ವರ್ಷಗಳ ಅನುಭವವಿರುವವರು ಬೇಕಾಗಿದ್ದಾರೆ.
ಸ್ಥಳ: ತರೀಕೆರೆ, ಚಿಕ್ಕಮಗಳೂರು ಜಿಲ್ಲೆ.
9743316362

CHANGE OF NAME

I, **NANDA PRABHAKAR** W/o Prabhakara Gogi, residing at 2nd Cross, Achutha Rao Layout, Shivamogga - 577201 have changed my name from **NANDA** D/o **DHARANAPPA DEVENDRAPPA NANJANGUD** (old names) to **NANDA PRABHAKAR** D/o **DHARANAPPA NANJANGUD POMMAIAH** (new names) vide affidavit dated 26-03-2026 sworn before Notary Bhavani Rao S., Shivamogga. Henceforth all my transactions & dealings will be in my new name **NANDA PRABHAKAR** D/o **DHARANAPPA NANJANGUD POMMAIAH.**